ಸಮಯದ ಪ್ರತಿ ಕ್ಷಣವನೂ
ತೀವ್ರವಾಗಿ ಜೀವಿಸು
ಕಳೆದು ಹೋಗುವ ಮೊದಲು!
ಏಕೆಂದರೆ
ಮರಳಿ ಬರುವುದು
ಸಮಯವಲ್ಲ
ಗತಿಸಿದ ನೆನಪುಗಳು ಮಾತ್ರ...

ಮಿರ್ಜಾ ಗಾಲಿಬರ ಈ ಗಜಲ್ ಸಂಕಲನವನ್ನು ಕೈಯಲ್ಲಿ ಹಿಡಿದಾಗಲೆಲ್ಲಾ ಸುಮತಿಗೆ ಬೇರೆಲ್ಲಾ ಗಜಲ್‌ಗಳಿಗಿಂತ ಇದೇ ಇಷ್ಟವಾಗೋದು. ತನ್ನ ಸಮಯವನ್ನು ಪತಿ–ಮಕ್ಕಳ ಸೇವೆಯಲ್ಲಿ ಕಳೆಯುತ್ತಿರುವುದಕ್ಕಾ ಅಥವಾ ತನ್ನ ಅಸ್ತಿತ್ವವೆಲ್ಲಾ ಮನೆಯೇ ಮಂತ್ರಾಲಯ ಮಾಡಿಕೊಂಡಿರುವುದಕ್ಕಾ... ಅವಳಿಗೆ ಒಮ್ಮೊಮ್ಮೆ ಇದು ತಾನಾ ಎನ್ನುವಷ್ಟು ಅವಳ ಮೇಲೆ ಅವಳಿಗೇ ಜಿಗುಪ್ಸೆ ಬಂದಿದ್ದಿದೆ.

'ಅಜ್ಜಿ ನನ್ನ ಸಾಕ್ಸ್ ನೋಡಿದ್ಯಾ?' ಎಂದು ಮೊಮ್ಮಗಳು ಕೂಗಿದ ತಕ್ಷಣ ಪುಸ್ತಕದಿಂದ ತಲೆಯೆತ್ತಿ, 'ಅಲ್ಲೇ ಎಲ್ಲೋ ಇರಬೇಕು ನೋಡು' ಎಂದು ಮತ್ತೆ ಪುಸ್ತಕದೊಳಕ್ಕೆ ಸೇರಿಕೊಳ್ಳಲು ನೋಡಿದಳು.

'ಅಜ್ಜಿ ಕಾಣಿಸ್ತಾ ಇಲ್ಲ, ನಿಂಗೇನು ಎಕ್ಸಾಮಾ ಬೆಳಬೆಳಗ್ಗೆ ಪುಸ್ತಕ ಹಿಡಕೊಂಡಿ' ಎಂದು ಮೊಮ್ಮಗಳ ಅಸಹನೀಯ ಪ್ರಶ್ನೆ. ಅದೆಷ್ಟು ಕಾಲ ಆಯ್ತು, ಕಾಫಿ ಒಂದೊಂದೇ ಸಿಪ್ ಹೀರುತ್ತಾ ಗಾಲಿಬನನ್ನು ಮನದೊಳಗೆ ಹೀರಿಕೊಳ್ಳದೇ ಅವಳೇ ಪ್ರಶ್ನೆ ಹಾಕಿಕೊಂಡಳು.

ಸುಮತಿ, ಧರಣೇಂದ್ರನ ಕೈಹಿಡಿದಾಗ ಅವಳ ಓದು ಇನ್ನು ಮುಗಿದಿರಲಿಲ್ಲ. ಮುಂದೆ ಓದಬೇಕು, ಏನಾದರೂ ಬರೆಯಬೇಕು ಎನ್ನುವ ಮಹದಾಸೆಯೊಂದಿಗೆ ಗಂಡನ ಮನೆ ಸೇರಿದ್ದಳು. ಬ್ಯಾಂಕ್ ಮ್ಯಾನೇಜರ್ ಆದ ಆತ ವರ್ಷಕ್ಕೊಮ್ಮೆ ರಾಜ್ಯದಿಂದ ಬೇರೆ ಬೇರೆ ರಾಜ್ಯಗಳಿಗೆ ಟ್ರಾನ್ಸ್‌ಫರ್ ಆಗಿ, ತನ್ನ ಬದುಕು ಬರೀ ಗಂಟುಮೂಟೆ ಕಟ್ಟುವುದರಲ್ಲಿಯೇ ಮುಗಿಯಿತು ಎನ್ನುವಾಗ ಬಸುರಿ ಆದಳು. ಒಂದು ಮಗುವಾದರೆ ಸಾಕು, ಆಮೇಲೆ ಓದಬೇಕು ಅಂತ ತೀವ್ರವಾಗಿ ಅನಿಸಿತ್ತು. ಆದರೆ 'ವೋ ಚೀಜ್ ಜಿಸೇ ದಿಲ್ ಕೆಹತೇ ಹೈ| ಹಮ್ ಭೂಲ್ ಗಯೇ ಹೈ, ರಖ್ ಕೆ ಕಹೀಂ' ಎಂಬ ಗುಲ್ಜಾರರ ಈ ಮಾತು ಅದೆಷ್ಟು ಸತ್ಯ! ತಾನೊಂದು ಬಯಸಿದರೆ ದೈವವೊಂದು ಬಯಸಿತು ಎನ್ನಿಸಿದ್ದು ನಿಜವಾಗಿತ್ತು. ಮೂರು ತಿಂಗಳ ನಂತರ ಗರ್ಭಸ್ರಾವ, ಅದಕ್ಕೆ ಬಾಣಂತನ. ಹಿರಿಯರಾರೂ ಇಲ್ಲದ ಮನೆಯಲ್ಲಿ ತನಗೆ ತಾನೇ ತೋಚಿದ್ದು ಮಾಡಿಕೊಂಡಳು.

ಅವಳಿಗೆ ಒಳ್ಳೆ ಗೆಳತಿಯರೂ ಅಷ್ಟೇನೂ ಇರಲಿಲ್ಲ. ಇದ್ದ ಉಮಾ ಅಮೆರಿಕಗೆ ಮದುವೆಯಾಗಿದ್ದಳು. ಆಗೊಮ್ಮೆ ಈಗೊಮ್ಮೆ ಫೋನ್ ಮಾಡಿದರೆ ಅವಳದೇ ಮಾತು. ಮಧ್ಯೆ ಮಧ್ಯೆ ಚೆನ್ನಾಗಿದ್ದೀಯಾ ಎನ್ನುತ್ತಿದ್ದಳು ಅಷ್ಟೇ. ಗಂಡನಿಗೆ ಬ್ಯಾಂಕ್‌ದೇ ಹೈರಾಣ. ರಜಗಳಲ್ಲಿ ಅವನಿಗೆ ಅವನದೇ ಗಂಡು ಗುಂಪು. ಕುಡಿಯುತ್ತಾ ಸಂಜೆಗಳನ್ನು ಸುಡುತ್ತಿದ್ದರು. ಯಾರಾದರೂ ಕೇಳಿದರೆ, 'ಅವಳೋ ಪುಸ್ತಕದ ಹುಳ' ಎಂದು ಮಾತು ಮರೆಸುತ್ತಿದ್ದ. ಮತ್ತೊಮ್ಮೆ ಬಸುರಿಯಾಗಿ 'ಅವಳಿ ಮಕ್ಕಳು' ಎಂದಾಗ ಸುಮತಿ ಗಾಬರಿಯಾಗಿದ್ದಳು. 'ಡಬಲ್ ಧಮಾಕಾ' ಅಂತ ಗಂಡ ಖುಷಿಪಟ್ಟಿದ್ದ.

ಮಕ್ಕಳಾದಾಗ ಅವರು ಭೂಪಾಲದಲ್ಲಿದ್ದರು. ಅವಳಿಗೆ ಗಾಳಿಯಲ್ಲಿ ಸುಳಿದಾಡಿ ವಿಷಾನಿಲ ಮಕ್ಕಳನ್ನೆಲ್ಲಿ ಸಾಯಿಸುತ್ತೋ ಎಂಬ ಭಯ. ಗಂಡನಿಗೆ ಕಾಟ ಕೊಟ್ಟು, ಟ್ರಾನ್ಸ್‌ಫರ್ ಮಾಡಿಸಿಕೋ ಎಂದು ದುಂಬಾಲು ಬಿದ್ದಿದ್ದಳು. ಅಲ್ಲಲ್ಲಿ ಭೂಪಾಲದ ದುರಂತದ ಕತೆಗಳು ಕೇಳಿ ಬಂದಾಗ ಕಷ್ಟಪಟ್ಟು ಹೆತ್ತ ಕುಡಿಗಳಿಗದ್ದೇ ಚಿಂತೆಯಾಗಿ ಅಂತೂ ದೆಹಲಿಗೆ ಬಂದರು. ಅವಳಿ ಮಕ್ಕಳಲ್ಲಿ ಒಂದು ಮಲಗಿದ್ರೆ, ಒಂದಕ್ಕೆ ಎಚ್ಚರ. ಹಸಿವು, ಬಟ್ಟೆ, ಆಟ–ಪಾಠ, ಇದರಲ್ಲೇ ಅವಳ ಯೌವನ ಯಮುನೆಯೊಂದಿಗೆ ತೇಲಿ ಹೋಯ್ತು.

ಅವಳಿಗಿನ್ನೂ ನೆನಪಿದೆ, ಗುಲ್ಜಾರರ ಗಜಲ್ ಕಾರ್ಯಕ್ರಮ ದೆಹಲಿಯಲ್ಲಿ. ಮಕ್ಕಳಿನ್ನೂ ಪುಟ್ಟವರು. ಭಾನುವಾರದ ಆ ಕಾರ್ಯಕ್ರಮಕ್ಕೆ ಗಂಡನಿಗೆ ಗಂಟುಬಿದ್ದು ಟಿಕೆಟ್ ತರಿಸಿಕೊಂಡು ಒಂದು ತಿಂಗಳಿಂದ ತಯಾರಿ ನಡೆಸಿದ್ದಳು. 'ಮಗಳನ್ನು ನಾನು ಕರಕೊಂಡು ಹೋಗ್ತೀನಿ, ನೀವು ಮಗನನ್ನು ನೋಡಿಕೊಳ್ಳಿ' ಎಂದು ಪದೇ ಪದೇ ಹೇಳಿ ಒಪ್ಪಿಸಿದ್ದಳು. ಅಂತೂ ಅವಳಂದುಕೊಂಡ ಗಳಿಗೆ ಬಂತು. ತಲೆಸ್ನಾನ ಮಾಡಿ ಸಿಂಗರಿಸಿಕೊಂಡು ಸಂಜೆ ಏಳರ ಕಾರ್ಯಕ್ರಮಕ್ಕೆ ಕೈಗೂಸನ್ನು ಕರೆದುಕೊಂಡು ಅದಕ್ಕಾಗಿ ಬೇಕಾಗುವ ಹಾಲು, ಬಟ್ಟೆಬರೆ ಹೊಂದಿಸಿಕೊಂಡು ಪಹಾರಗಂಜ್ ತಲುಪಿದಳು. ಗುಲ್ಜಾರರ ಆ ಕಾರ್ಯಕ್ರಮಕ್ಕೆ ಸಾವಿರಾರು ಜನ ಸೇರಿದ್ದರು. ಟಿಕೆಟ್ ಕೊಟ್ಟು ತನ್ನ ಜಾಗದಲ್ಲಿ ಇನ್ನೇನು ಕುಳಿತುಕೊಳ್ಳಬೇಕು ಕೂಸು ಒಂದೇ ಸಮನೆ ಅಳಲು ಪ್ರಾರಂಭಿಸಿತು. ಮನೆಯಲ್ಲಿ ಮಾತ್ರ ಇದ್ದ ಮಗುವಿಗೆ ಆ ಗೌಜು ಗಲಾಟೆ ಹಿಡಿಯದಾಯಿತೋ ಏನೋ? ಅಂತೂ ತೆಗೆದ ರಾಗ ನಿಲ್ಲಿಸಲೇ ಇಲ್ಲ. ಅದೆಷ್ಟು ಸಮಾಧಾನ ಮಾಡುವುದು. ಗುಲ್ಜಾರ್ ಬಂದರು. ದೂರದಿಂದಲೇ ಕಣ್ತುಂಬಿಕೊಂಡಳು, ದೇವರಂತೆ. ಅಳುವ ಮಗುವಿನ ಕಡೆ ಜನ 'ಚುತ್ ಚುತ್' ಎಂದರು, 'ಬಂದ್ ಕರೋ ಬಚ್ಚೋಕೋ' ಎಂದರು. ಸುಮತಿ ಇನ್ನು ಅಲ್ಲಿ ಇರಲಾಗದೇ ತನ್ನೆಲ್ಲಾ ಕನಸುಗಳನ್ನು ಗಂಟಾಕಿಕೊಂಡಂತೆ ಕೂಸನ್ನು ಎದೆಗಾನಿಸಿ ಹೊರನಡೆದಳು.

ಊರೂರು ಸುತ್ತಿ, ನಿವೃತ್ತಿ ನಂತರ ಸ್ವಂತ ಮನೆಯೊಂದನ್ನು ಬೆಂಗಳೂರಿನಲ್ಲಿ ಖರೀದಿಸಿ, ಅಕ್ಷಯ–ಅನುವನ್ನು ಎಂಜಿನಿಯರ್ ಮಾಡಿ, ಮದುವೆ ಮಾಡಿ ದಡ ಸೇರಿಸಿದಳು. ಇನ್ನು ಆರಾಮ, ತನ್ನದೇ ಬದುಕು ಅನ್ನಿಸಿದ್ದು ಅವಳ ಅರವತ್ತರ ಹರೆಯದಲ್ಲಿ. ನಿಮಗೇನು, ಮಕ್ಕಳು ಅಮೆರಿಕದಲ್ಲಿದ್ದಾರೆ. ಡಾಲರ್ ಕಳಿಸ್ತಾರೆ, ಮಜಾ ಮಾಡಿ ಎಂದೆಲ್ಲಾ ಮಾತು ಅಕ್ಕಪಕ್ಕದವರಿಂದ. ಅಂತಹ ಮಾತುಗಳಿಗೆಲ್ಲಾ ಸುಮತಿ ಹೌದೆಂಬಂತೆ ತಲೆಯಾಡಿಸುತ್ತಾಳೆ. ಅವರವರ ಮನೆಯ ದೋಸೆಯ ತೂತುಗಳು ಅವರಿಗೆ ಮಾತ್ರ ಗೊತ್ತಿರೋದಲ್ಲವಾ?

ಗಂಡ ಕ್ಲಬ್ ಅಂತ ಹೋದರೆ ಸುಮತಿ ಪ್ರತಿ ದಿನ 'ನಗರದಲ್ಲಿಂದು' ನೋಡಿ ಕಾರ್ಯಕ್ರಮಗಳಿಗೆ ಹೋಗುವುದು, ತನಗಿಷ್ಟದ ಚಲನಚಿತ್ರ, ಒಬ್ಬಳೇ ಪ್ರಯಾಣ ಇದೆಲ್ಲಾ ಅವಳಿಗೆ ಇಷ್ಟದ್ದು. ಅಂತೂ ದೇವರು ಕರುಣಾಮಯಿ, ಈಗಲಾದರೂ ಆಯ್ತಲ್ಲಾ, ಅದೇ ಸಮಾಧಾನ. ಅವಳ ಸಂಬಂಧಿಗಳು ಮಾತ್ರ ಅಲ್ಲಿ ಇಲ್ಲಿ ಸಿಕ್ಕಾಗ 'ಸುಮತಿ ಒಂಟಿ ಗೂಬೆ, ಈ ಕಾಲದಲ್ಲಿ ದೇವರು, ನೋಂಪಿ ಅಂತ ಇರದೆ ಅದೇನೋ ಎಲ್ಲೆಲ್ಲೋ ಸುತ್ತಾಡ್ತಾಳೆ' ಅಂತ ಅವಳ ಕಿವಿಗೆ ಬೀಳುವಂತೆ ಹೇಳಿದ್ದು ಮಾತ್ರ ಸುಮತಿಗೆ ಅವರ ಬಗ್ಗೆ ಸಹಾನುಭೂತಿ ತರಿಸುತ್ತಿತ್ತು.

ದೇವಸ್ಥಾನದಲ್ಲಿ ಇವರಾಡುವ ಕೊಂಕು ಮಾತುಗಳು, ಢೋಂಗಿ ಭಕ್ತಿ ಪ್ರದರ್ಶನ, ನೋಂಪಿ ಮಾಡುವಾಗ ಅವರ ಸಣ್ಣತನ, ಇದೆಲ್ಲದರಿಂದ ಸುಮತಿ ದೂರ ಇದ್ದಳು. ತನ್ನ ಭಕ್ತಿ ತನ್ನ ದೇವರ ಬಗ್ಗೆ ಅವಳಿಗೆ ಅವಳದೇ ಆದ ನಿಲುವಿತ್ತು.

ಅದೊಂದು ಬೆಳಗ್ಗೆ 'ಅಮ್ಮ, ನನಗೆ ಬೆಂಗಳೂರಿನಲ್ಲೇ ಹೊಸ ಕಂಪನಿ ಸಿಕ್ಕಿದೆ, ಬರ್ತಿದ್ದೀನಿ' ಎಂದು ಮಗ ಎಂದಾಗ, ಸುಮತಿ ಒಂದು ಕ್ಷಣ ಖುಷಿಯಿಂದ 'ಹೌದಾ... ಬಾ ಬಾ' ಎಂದು ಕರೆದಳು. ಕರುಳಬಳ್ಳಿಗಳು ಹೊರಗಿದ್ದದ್ದು ಕೆಲವೊಮ್ಮೆ ನೀರಿನಿಂದ ಹೊರಗುಳಿದ ಮೀನಿನಂತೆ ಆಗುತ್ತಿತ್ತಲ್ಲ. ಮಗ–ಸೊಸೆ–ಮೊಮ್ಮಗು ಬಂದರೆ ಸಂತಸ ಮತ್ತೆ ಮನ ತುಂಬುತ್ತದೆ ಅನ್ನಿಸಿದ್ದು ಸುಳ್ಳಲ್ಲ. 'ಅಪಾರ್ಟ್‌ಮೆಂಟ್ ನೋಡೋಣ ಬನ್ನಿ' ಎಂದಳು.

'ಅದೆಲ್ಲಾ ಏನಿಲ್ಲ, ಇಲ್ಲಿ ಒಂಟಿಯಾಗಿದ್ದು ಸಾಕಾಗಿದೆ, ನಿಮ್ಮ ಜೊತೆ ಇರೋಕೆ ಬರ್ತಿರೋದು' ಮಗನ ಮಾತು.

ಇದೊಂದು ತರಹ ಗುಲಾಬಿ ಜೊತೆಯ ಮುಳ್ಳಿನಂಗೆ ಅನ್ನಿಸಿದ್ದು ಜೊತೆಗೆ ಇರಲಾರಂಭಿಸಿದಾಗಲೇ!

ಇಬ್ಬರೂ ಐಟಿ ಕಂಪನಿ. ಮಗುವಿನ ಜವಾಬ್ದಾರಿ ಸುಮತಿ ತಲೆಗೆ. ಗಂಡನಿಗೆ ಇತ್ತೀಚೆಗೆ ಮರಗುಳಿತನ ಜಾಸ್ತಿಯಾಗಿದೆ. ಮೊದಮೊದಲು ಪ್ರೀತಿಯಿಂದ ಕೆಲಸಗಳನ್ನು ತಲೆ ಮೇಲೆ ಹೊತ್ತು ಮಾಡಿದ್ದ ಸುಮತಿಗೆ ಹೀಗೇಕೋ ಕಿರಿಕಿರಿ. 'ಇದೆಂಥ ಕರ್ಮ ನನಗೆ. ನನ್ನ ಮಕ್ಕಳ ಜವಾಬ್ದಾರಿ ಆಯ್ತು. ಈಗ ಇದಾ?' ಎಂದು ಅಸಹನೆಯಿಂದಲೇ ಕಿರುಚಿದಳು. 'ನಿನಗಾಗಲ್ಲ ಅಂದ್ರೆ ಹೇಳಿಬಿಡು ನಿನ್ನ ಮಗನಿಗೆ' ತಣ್ಣನೆ ದನಿ ಗಂಡನದ್ದು. ಅಷ್ಟು ಸುಲಭವಾ? ಗಂಟಲಲ್ಲಿ ಸಿಕ್ಕಿಕೊಂಡ ಮಾತನ್ನು ಹೊರಗಾಕುವುದು.

ಮತ್ತಷ್ಟು ದಿನಗಳು ಹೀಗೇ ಕಳೆದುಹೋದವು. ಗಂಡನಿಗೆ ಇದೀಗ ಮೂರನೇ ಸ್ಟೇಜ್ ಅಲ್ಜೈಮರ್. 'ಒಬ್ಬರನ್ನೇ ಎಲ್ಲೂ ಬಿಡಬೇಡಿ' ಡಾಕ್ಟರ್ ಸಲಹೆ.

ಅವನ, ಮಕ್ಕಳ ಸೇವೆಯಲ್ಲೇ ತನ್ನ ಆಸೆ ಆಕಾಂಕ್ಷೆಯ ಬಳ್ಳಿ ಕತ್ತರಿಸಿ ಕತ್ತರಿಸಿ ತಾನು ಇರೋದೇ ಸೇವೆಗಾಗಿ ಅನ್ನಿಸಲು ಶುರು ಆಗಿತ್ತು.

'ನನಗೆ ತಿಂಡಿ ಕೊಡ್ತಿಯಾ?' ಎಂದು ಗಂಡ ಕೇಳಿದಾಗಲೇ ವಾಸ್ತವಕ್ಕೆ ಬಂದಳು.

'ಈಗ ತಾನೇ ತಿಂದ್ರಲ್ಲಾ?'

'ಹೌದಾ' ಕಣ್ಣರಳಿಸಿದ.